# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಬಿಸಿಡಿ/3131/2022**
**ಪಿ.ಎ.ಆರ್.ಇ-5 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 20/03/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** **ಶ್ರೀ ಭಾಸ್ಕರ ಸಿದ್ರಾಮಪ್ಪ ಚೌರ ಬಿನ್ ಲೇಟ್ ಸಿದ್ರಾಮಪ್ಪ, ಉಪ ನೋಂದಣಾಧಿಕಾರಿಗಳು, ಜಾಲಾ ಉಪ ನೋಂದಣಾಧಿಕಾರಿಗಳ ಕಚೇರಿ, ಚಿಕ್ಕಜಾಲ ಟೌನ್, ಬೆಂಗಳೂರು** ಇವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

ಆರಕ್ಷಕ ನಿರೀಕ್ಷಕರು, ಎಸಿಬಿ ಪೋಲಿಸ್ ಠಾಣೆ, ಬೆಂಗಳೂರು ನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ ಭಾಸ್ಕರ ಸಿದ್ರಾಮಪ್ಪ ಚೌರ, ಬಿನ್ ಲೇಟ್ ಸಿದ್ರಾಮಪ್ಪ, ಉಪ ನೋಂದಣಾಧಿಕಾರಿಗಳು, ಜಾಲಾ ಉಪ-ನೋಂದಣಾಧಿಕಾರಿಗಳ ಕಚೇರಿ, ಚಿಕ್ಕಜಾಲಾ ಟೌನ್, ಬೆಂಗಳೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ ಜಗದೀಶ ಹೆಚ್.ಎಂ, ಬಿನ್ ಮಲುವಳಯ್ಯ, ಮಾರುತಿ ನಗರ, ನಂದಿನಿ ಲೇಜೌಟ್, ಬೆಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಹೆಸರುಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಅಸೆಸ್‌ಮೆಂಟ್ ನಂ:156/2 ರಲ್ಲಿ 18ನೇ ನಂಬರಿನ ನಿವೇಶನ, ಇದರ ಅಳತೆ 30*40 ಇದನ್ನು ಮುನಿಕೃಷ್ಣಪ್ಪನವರಿಂದ ಖರೀದಿ ಮಾಡಿದ್ದು, ಕ್ರಯ ಪತ್ರವನ್ನು ನೋಂದಣಿ ಮಾಡಿಸುವ ಸಲುವಾಗಿ ಎದುರುದಾರರನ್ನು ದಿನಾಂಕ:04/04/2019

ರಂದು ಭೇಟಿಯಾದಾಗ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 04/04/2019 ರಂದು ಬೆಂಗಳೂರು ನಗರ ಎಸಿಬಿ ಪೋಲಿಸ್ ಠಾಣಾ ಗುನ್ನಾ ನಂ. 11/2019 ರಲ್ಲಿ ದಾಖಲಾಗಿದ್ದು ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7 (a) A, ಸ/ವಾ 12ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ರೂ. 15,000/- ಲಂಚ ಪಡೆದು ರೆಡ್ ಹ್ಯಾಂಡ್ ಆಗಿ ಸಿಕ್ಕಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

2) <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:</u>

i) ದೂರುದಾರರು ಹೆಸರುಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಅಸೆಸ್‌ಮೆಂಟ್ ನಂ:156/2 ರಲ್ಲಿ 18ನೇ ನಂಬರಿನ ನಿವೇಶನ, ಇದರ ಅಳತೆ 30*40 ಇದನ್ನು ಮುನಿಕೃಷ್ಣಪ್ಪನವರಿಂದ ಖರೀದಿ ಮಾಡಿದ್ದು, ಕ್ರಯ ಪತ್ರವನ್ನು ನೋಂದಣಿ ಮಾಡಿಸುವ ಸಲುವಾಗಿ ಎದುರುದಾರರ ಕಚೇರಿಗೆ ದಿನಾಂಕ:03/04/2019 ರಂದು ಹೋಗಿ ಕಚೇರಿಯಲ್ಲಿದ್ದ ಶ್ರೀ ಗಿರೀಶ್ ಪಿ.ಆರ್, ಇವರನ್ನು (ಉಪನೋಂದಣಾಧಿಕಾರಿಯವರ ಖಾಸಗಿ ಸಹಾಯಕ) ಭೇಟಿ ಮಾಡಿ ವಿಚಾರಿಸಲಾಗಿ, ರೂ. 25,000/- ಲಂಚ ಕೊಟ್ಟರೆ ಮಾತ್ರ ಉಪನೋಂದಣಾಧಿಕಾರಿಗಳು ನೋಂದಣಿ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಆ ದಿನ ಎದುರುದಾರರು ಚುನಾವಣಾ ಕರ್ತವ್ಯದ ಮೇಲೆ ಹೊರಗಡೆ ಹೋಗಿದ್ದರಿಂದ ಮರು ದಿನ ದಿನಾಂಕ:04/04/2019 ರಂದು ನಿವೇಶನದ ಖರೀದಿ ವಿಚಾರದಲ್ಲಿ ಎದುರುದಾರರನ್ನು ಭೇಟಿ ಮಾಡಲಾಗಿ, ಮೊದಲು ರೂ. 25,000/- ಲಂಚ ನೀಡಬೇಕೆಂದು ಕ್ಯಾಲಕ್ಯುಲೇಟ್‌ರ್‌ನಲ್ಲಿ

ಟೈಪ್ ಮಾಡಿ ತೋರಿಸಿರುತ್ತಾರೆ. ದೂರುದಾರರು ಆಗುವುದಿಲ್ಲ ಎಂದಾಗ ರೂ. 20,000/- ಎಂದು, ನಂತರ ಅದಕ್ಕೂ ಆಗುವುದಿಲ್ಲವೆಂದಾಗ ರೂ.15,000/- ಎಂದು ಕ್ಯಾಲಕ್ಯುಲೇಟ್‌ರ್‌ನಲ್ಲಿ ಟೈಪ್ ಮಾಡಿ ತೋರಿಸಿರುತ್ತಾರೆ. ಕೊನೆಗೆ ತಮ್ಮ ಖಾಸಗಿ ಸಹಾಯಕ ಗಿರೀಶ ಇವರನ್ನು ಬೇಟಿಯಾದಲ್ಲಿ ಆತನು ಎಷ್ಟು ಲಂಚ ನೀಡಬೇಕೆಂಬುದನ್ನು ತಿಳಿಸುತ್ತಾರೆಂದು ನುಡಿದು ನಿವೇಶನದ ಕ್ರಯಪತ್ರಕ್ಕೆ ಸಹಿ ಮಾಡಿ ನೋಂದಣಿ ಮಾಡಲು ಕಂಪ್ಯೂಟರ್ ಆಪರೇಟರ್ ಬಳಿ ಕೊಡಲು ತಿಳಿಸಿರುತ್ತಾರೆ. ನಂತರ ಗಿರೀಶ ಇವರನ್ನು ಭೇಟಿ ಮಾಡಿದ್ದು, ಎದುರುದಾರರೊಂದಿಗೆ ಮತ್ತು ಗಿರೀಶ ಇವರೊಂದಿಗೆ ನಡೆಸಿದ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಅದನ್ನು ಒಂದು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲದೇ ಇದ್ದರಿಂದ ಅದೇ ದಿನ ಅಂದರೆ ದಿನಾಂಕ:04/04/2019 ರಂದು ಬೆಂಗಳೂರು ನಗರ ಎಸಿಬಿ ಪೊಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.11/2019 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7(a) (A) ಸ/ವಾ 12ರ ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ನಂದೀಶ ಬಿ.ಎನ್. (ನೆರಳು ಸಾಕ್ಷಿ) 2) ನರಸಿಂಗ್‌ರಾವ್, ಇವರುಗಳನ್ನು ಬರಮಾಡಿಕೊಂಡು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಸಿ.ಡಿಯಲ್ಲಿರುವ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ನಂತರ ಸದರಿ ಸಂಭಾಷಣೆಯನ್ನು ಲಿಪಿಕರಿಸಿಕೊಂಡಿರುತ್ತಾರೆ ಮತ್ತು ತನಿಖಾಧಿಕಾರಿ ಸದರಿ ಸಿ.ಡಿ.ಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡಲು ತಂದ ರೂ. 15,000/- (500X30)

ಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿದ್ದು, ಸದರಿ ಹಣವನ್ನು ಪಂಚಸಾಕ್ಷಿ-2 ಶ್ರೀ ನರಸಿಂಗ್‌ರಾವ್ ಇವರ ಮೂಲಕ ದೂರುದಾರರ ಪ್ಯಾಂಟಿನ ಎಡ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ನರಸಿಂಗ್‌ರಾವ್ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಶ್ರೀ ನಂದೀಶ ಬಿ.ಎನ್. ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಗಡ್ಡವನ್ನು ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿನಾಂಕ:05/04/2019 ರಂದು ಬೆಳಿಗ್ಗೆ 9-30 ರಿಂದ 11:00 ರ ವರೆಗೆ ಬೆಂಗಳೂರು ನಗರ ಎಸಿಬಿ ಪೊಲೀಸ್ ಠಾಣೆಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಬೆಂಗಳೂರು ನಗರ ಎಸಿಬಿ ಪೊಲೀಸ್ ಠಾಣೆಯನ್ನು ಬಿಟ್ಟು, 11:50 ಘಂಟೆಗೆ ಜಾಲಾ ಟೌನ್ ತಲುಪಿ, ಜಾಲಾ ಗ್ರಾಮದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ನಿವೇಶನ ಖರೀದಿಗೆ ಬೇಕಾಗುವ ಮೂರು ಡಿ.ಡಿ ಗಳನ್ನು

ಖರೀದಿಸಿ, ಸುಮಾರು 100 ಮೀಟರ್ ದೂರದಲ್ಲಿ ವಾಹನಗಳನ್ನು ನಿಲ್ಲಿಸಿ ದೂರುದಾರರು ಹಾಗೂ ನೆರಳು ಸಾಕ್ಷಿಗೆ ಮತ್ತೊಮ್ಮೆ ಸೂಚನೆ ನೀಡಿ ಸದರಿಯವರನ್ನು 12–55 ಕ್ಕೆ ಕಚೇರಿಯ ಒಳಗಡೆ ಕಳುಹಿಸಿ, ದಾಳಿತಂಡದವರು ಕಚೇರಿಯ ಹೊರಭಾಗದಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಎದುರುದಾರರು ಕಚೇರಿಯಲ್ಲಿ ಹಾಜರಿದ್ದು, ಕೈ ಸನ್ನೆ ಮಾಡಿ ನೋಂದಣಿ ಕಾರ್ಯವನ್ನು ಮುಗಿಸುವಂತೆ ತಿಳಿಸಿದ್ದು, ಸುಮಾರು ಮಧ್ಯಾಹ್ನ 1–25 ಕ್ಕೆ ನೋಂದಣಿ ಕಾರ್ಯ ಮುಗಿದಿರುತ್ತದೆ. ದೂರುದಾರರು ಕ್ರಯಪತ್ರವನ್ನು ಪಡೆದುಕೊಂಡ ನಂತರ, ಎದುರುದಾರರಿಗೆ ಹಣವನ್ನು ನೀಡಲು ಹೋದಾಗ, ಗಿರೀಶನನ್ನು ಭೇಟಿ ಮಾಡಿದ್ದಿರಾ ಎಂದು ಕೇಳಿ, ಗಿರೀಶ ಕಚೇರಿಯಲ್ಲಿ ಇಲ್ಲವಾದ್ದರಿಂದ ಕ್ಯಾಲಕ್ಯುಲೇಟರ್‌ನಲ್ಲಿ ಗಿರೀಶ ಇವರ ಮೊಬೈಲ್ ನಂಬರನ್ನು ಟೈಪ್ ಮಾಡಿ ಸದರಿಯವರನ್ನು ಕಾಣುವಂತೆ ತಿಳಿಸಿರುತ್ತಾರೆ. ಕಚೇರಿಯಲ್ಲಿ ಗಿರೀಶ ಇಲ್ಲದಿರುವುದನ್ನು ಮನಗಂಡು ಹಣವನ್ನು ಟೇಬಲ್ ಮೇಲೆ ಇಡುವಂತೆ ಎದುರುದಾರರು ಕಣ್ಸನ್ನೆ ಮಾಡಿದ ಮೇರೆಗೆ, ದೂರುದಾರರು ಹಣವನ್ನು ಟೇಬಲ್ ಮೇಲೆ ಇಟ್ಟಿದ್ದು, ಅದನ್ನು ಎದುರುದಾರರು ತಮ್ಮ ಎಡಗೈಯಿಂದ ತೆಗೆದುಕೊಂಡಿರುತ್ತಾರೆ. ನಂತರದಲ್ಲಿ ದೂರುದಾರರು ಪೊಲೀಸರಿಗೆ ಸೂಚನೆ ನೀಡಿರುತ್ತಾರೆ. ತಕ್ಷಣ ತನಿಖಾಧಿಕಾರಿಗಳು ಸ್ಥಳಕ್ಕೆ ಬಂದು ತಮ್ಮ ಪರಿಚಯ ಮಾಡಿಕೊಂಡು ಎದುರುದಾರರ ಮೇಲೆ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. ಘಟನೆ ಕುರಿತಂತೆ ದೂರುದಾರರಿಗೆ ವಿಚಾರಿಸಲಾಗಿ ದೂರುದಾರರು ಮೇಲಿನಂತೆ ನಡೆದ ವಿಚಾರವನ್ನು ತನಿಖಾಧಿಕಾರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಅನುಸರಿಸಿ ನೆರಳು ಸಾಕ್ಷಿ ಕೂಡಾ ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು

ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಬಲಗೈ ಬೆರಳುಗಳನ್ನು ತೊಳೆಯಲಾಗಿ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ. ಎದುರುದಾರರನ್ನು ಹಣದ ಬಗ್ಗೆ ವಿಚಾರಿಸಲಾಗಿ ಎದುರುದಾರರು ಏನು ಉತ್ತರಿಸದೆ ತನಿಖೆಗೆ ಅಸಹಕಾರ ನೀಡಿರುತ್ತಾರೆ. ಹಣ ಪಡೆದುಕೊಂಡ ನಂತರ ಎದುರುದಾರರು ತಮ್ಮ ಪಕ್ಕದಲ್ಲಿರುವ ಕಂಪ್ಯೂಟರ್ ಆಪರೇಟರ್ ಕ್ಯಾಬಿನ್ನಿನ ಕಿಟಕಿಯ ಹತ್ತಿರ ಹೋಗಿರುವುದಾಗಿ ದೂರುದಾರರು ತಿಳಿಸಿದ್ದರಿಂದ, ಸದರಿ ಕಂಪ್ಯೂಟರ್ ಆಪರೇಟರ್ ಕ್ಯಾಬಿನ್ನಿನ ಕಿಟಕಿಯ ಹೊರ ಭಾಗದ ನೆಲದ ಮೇಲೆ ಹಣವು ಇದ್ದುದ್ದನ್ನು ಪಂಚ–1 ರವರು ತೆಗೆದು ಹಾಜರಪಡಿಸಿದ್ದು, ಸದರಿ ಹಣದ ನಂಬರ್‌ಗಳನ್ನು ಈ ಮೊದಲು ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಹಣ ಇಟ್ಟ ಜಾಗೆಯನ್ನು ಹತ್ತಿಯಿಂದ ಒರೆಸಿ, ಅದನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ದೂರುದಾರರ ಕಡತಕ್ಕೆ ಸಂಬಂಧಿಸಿದ ಮೂರು ಸಿ.ಡಿ. ಗಳನ್ನು ಮತ್ತು ದಾಖಲೆಗಳ ಪ್ರತಿಗಳನ್ನು ಹಾಗೂ ಏಪ್ರಿಲ್–2019 ರ ಹಾಜರಾತಿ ಪುಸ್ತಕದ ಪ್ರತಿಯನ್ನು ತಯಾರಿಸಿ, ಎದುರುದಾರರ ಮೇಲಾಧಿಕಾರಿಯಾದ ಮಹಮ್ಮದ ಯೂಸುಫ್, ಜಿಲ್ಲಾ ನೋಂದಣಾಧಿಕಾರಿ ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಲಿಪಿಕರಿಸಿ ಅದನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎರಡು ಸಂಭಾಷಣೆ ಅಂದರೆ ಲಂಚ ಬೇಡಿಕೆ ಮತ್ತು ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯ ಲಿಪಿಕರಣವನ್ನು ಆರು ಬಾರಿ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್‌ಮಾಡಿಕೊಂಡು ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ಪ್ರಕಾರ ಲಂಚ ಬೇಡಿಕೆ ಮತ್ತು ಲಂಚ

ನೀಡುವ ಕಾಲಕ್ಕೆ ನಡೆದ ಸಂಭಾಷಣೆಯ ಲಿಪಿಕರಣವನ್ನು ಆರು ಬಾರಿ ಓದಿಸುವ ಮೂಲಕ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದ್ದು, ಈ ಕೆಳಕಂಡಂತೆ ಸಮಜಾಯಿಷಿಯನ್ನು ಬರೆದುಕೊಟ್ಟಿರುತ್ತಾರೆ. **“ ತಾನು ಕಚೇರಿಯಲ್ಲಿರುವಾಗ ಒಬ್ಬ ಅಪರಿಚಿತ ವ್ಯಕ್ತಿ ತನಗೆ ಹಣ ಕೊಡಲು ಪ್ರಯತ್ನಿಸಿ, ಒತ್ತಾಯ ಪೂರಕವಾಗಿ ಹಣವನ್ನು ತನ್ನ ಟೇಬಲ್ ಮೇಲೆ ಇಟ್ಟಿದ್ದು, ತಾನು ಹಣವನ್ನು ಆತನ ಕಡೆ ಸರಿಸಿ ಇದು ಸರ್ಕಾರಿ ಕಚೇರಿ, ಹಿಗೆಲ್ಲ ಮಾಡಬೇಡಿ ಹಣ ಎತ್ತಿಕೊಳ್ಳಿ ಎಂದಾಗ ಸದರಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ. ನಂತರ ಎಸಿಬಿ ತಂಡದವರು ದ್ರಾವಣದಲ್ಲಿ ತನ್ನ ಎರಡು ಕೈ ತೊಳೆಯಲಾಗಿ ಎಡಗೈ ತೊಳೆದ ದ್ರಾವಣ ತಿಳಿ ಕೆಂಪು ಬಣ್ಣಕ್ಕೆ ತಿರುಗಿದ್ದು, ಬಲಗೈ ತೊಳೆದ ದ್ರಾವಣ ತಿಳಿಯಾಗಿಯೇ ಇದ್ದು, ಎಡಗೈ ತೊಳೆದ ದ್ರಾವಣ ಕೆಂಪು ಬಣ್ಣಕ್ಕೆ ತಿರುಗಿದ್ದು, ತನಗೆ ಅರ್ಥವಾಗುತ್ತಿಲ್ಲ ಎಂದು ತನ್ನ ಸಮಜಾಯಿಷಿಯನ್ನು ಬರೆದುಕೊಟ್ಟಿರುತ್ತಾರೆ”.** ಸಮಜಾಯಿಷಿಯ ಬಗ್ಗೆ ದೂರುದಾರರು ಹಾಗೂ ನೆರಳು ಸಾಕ್ಷಿಯನ್ನು ಕೇಳಲಾಗಿ ಎದುರುದಾರರು ಬರೆದುಕೊಟ್ಟಿರುವ ಸಮಜಾಯಿಷಿ ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 05/04/2019 ರಂದು ಮಧ್ಯಾಹ್ನ 2:00 ರಿಂದ 6:00 ಘಂಟೆಯ ವರೆಗೆ ಎದುರುದಾರರು ಕೆಲಸ ಮಾಡುವ ಜಾಲಾ ಟೌನಿನಲ್ಲಿ ಇರುವ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ದಿನಾಂಕ: 15/06/2019 ರಂದು ಬೆಂಗಳೂರು ನಗರ ಎಸಿಬಿ ಪೊಲೀಸ್ ಠಾಣೆಯಲ್ಲಿ ಮೇಲೆ ನಮೂದಿಸಿದ ಪಂಚರ ಸಮಕ್ಷಮ ಇನ್ನೊಬ್ಬ ಸಹ ಅಪರಾಧಿಯಾದ ಶ್ರೀ ಗಿರೀಶ ಪಿ.ಆರ್. ಬಿನ್ ಲೇಟ್ ರಾಜಣ್ಣ, ಇವರು

ದಿನಾಂಕ:04/04/2019 ರಂದು ದೂರುದಾರರೊಂದಿಗೆ ನಡೆಸಿದ ಸಂಭಾಷಣೆಯ ಲಿಪಿಕರಣವನ್ನು ಹಾಗೂ ಪತ್ರಿಕೆಯೊಂದರ ವಾಕ್ಯಗಳನ್ನು ಸದರಿಯವರಿಂದ ಆರು ಬಾರಿ ಓದಿಸುವ ಮೂಲಕ ಸದರಿಯವರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ಬೆಳಿಗ್ಗೆ 11-05 ರಿಂದ 12-45 ಘಂಟೆಯವರೆಗೆ ಬರೆದ ಮಹಜರನಲ್ಲಿ ದಾಖಲಿಸಿರುತ್ತಾರೆ.

v) ತನಿಖಾ ಕಾಲದಲ್ಲಿ ಎದುರುದಾರರ ಎಡಗೈ ಕೈಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರು ದೂರುದಾರರೊಂದಿಗೆ ನಡೆಸಿದ ಸಂಭಾಷಣೆಯಲ್ಲಿಯ ಧ್ವನಿಯು ಸದರಿಯವರ ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯ ನೀಡಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಸದರಿಯವರನ್ನು ಸೇವೆಯಿಂದ ವಜಾಗೊಳಿಸಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದುಕೊಂಡಿರುತ್ತಾರೆ.

3) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ತಮ್ಮ ಪತ್ರ ದಿ:26.10.2022 ರಂತೆ ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ತನ್ನ ಮೇಲೆ ಸಲ್ಲಿಸಿದ ದೂರು ಸುಳ್ಳಿನಿಂದ ಕೂಡಿದ್ದು, ತಾನು ಲಂಚಕ್ಕೆ ಬೇಡಿಕೆಯಿಟ್ಟಿರುವುದಿಲ್ಲ ಮತ್ತು ಪಡೆದುಕೊಂಡಿರುವುದಿಲ್ಲ. ತನ್ನನ್ನು ಬಲಿ ಪಶು ಮಾಡಲು ಈ ಸುಳ್ಳು ದೂರನ್ನು ದಾಖಲಿಸಲಾಗಿರುತ್ತದೆ. ದೂರುದಾರರು ಮಧ್ಯಾಹ್ನ 12.50ಕ್ಕೆ ನೊಂದಾಯಿಸಿದ ಖರೀದಿ ಪತ್ರವನ್ನು ಪಡೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳ ಮುಂದೆ ನೀಡಿದ ಸಮಜಾಯಿಷಿಯಲ್ಲಿ ಅಪರಿಚಿತ ವ್ಯಕ್ತಿ ತನ್ನ ಕೊಠಡಿಯನ್ನು ಪ್ರವೇಶಿಸಿ ತನ್ನ ಟೇಬಲ್ ಮೇಲೆ ಲಂಚದ ಹಣವನ್ನು ಇಟ್ಟಾಗ

ತಾನು ಎಡಗೈಯಿಂದ ತಳ್ಳಿದ ನಂತರ ಸದರಿ ಹಣವನ್ನು ದೂರುದಾರರು ತೆಗೆದುಕೊಂಡು ಕಂಪ್ಯೂಟರ್ ಆಪರೇಟರ್ ಕೆಲಸ ಮಾಡುವ ಕಿಡಕಿಯಿಂದ ಕೆಳಗೆ ಎಸದಿರುತ್ತಾರೆ. ಹಣವನ್ನು ತಾನು ಎಡಗೈಯಿಂದ ತಳ್ಳಿದ್ದರಿಂದ ತನ್ನ ಎಡಗೈ ಬೆರಳನ್ನು ತೊಳೆದಾಗ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತಾನು ಲಂಚದ ಹಣ ಪಡೆದುಕೊಂಡಿದ್ದರೆ ಬಲಗೈಯಿಂದ ಪಡೆದುಕೊಳ್ಳುತ್ತಿದ್ದೆ. ದೂರುದಾರರ ಹೇಳಿಕೆಯ ಮೇರೆಗೆ ಎಫ್.ಐ.ಆರ್ ದಾಖಲಾಗಿರುವುದರಿಂದ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ. ದಾಳಿ ಕಾಲಕ್ಕೆ ಪೊಲೀಸರು ತನ್ನನ್ನು ಕ್ಯಾಬಿನ್‌ನಿಂದ ಹೊರಗೆ ಹೋಗದಂತೆ ತಡೆದು, ಹೊರಗೆ ಹೋದರೆ ಹೊಡಿಯುವುದಾಗಿ ಹೆದರಿಸಿರುತ್ತಾರೆ ಎಂಬುದಾಗಿ ತಮ್ಮ ಸಮಜಾಯಿಷಿಯಲ್ಲಿ ವಿವರಿಸಿರುತ್ತಾರೆ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಕೆಲವೊಂದು ತೀರ್ಪುಗಳನ್ನು ಆದರಿಸಿರುತ್ತಾರೆ. ಈ ಮೇಲೆ ಹೇಳಿದ ಕಾರಣಗಳಿಂದಾಗಿ ತನ್ನ ಮೇಲಿನ ದೂರನ್ನು ಮುಕ್ತಾಯ ಮಾಡಲು ವಿನಂತಿಸಿರುತ್ತಾರೆ.

**4)** ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾದಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಯಾವುದೇ ಆಧಾರಗಳು ಇರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಎದುರುದಾರರು ಆಧರಿಸಿದ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳು ಇಲಾಖಾ ವಿಚಾರಣೆಗೆ ಸಂಬಂಧಿಸಿದ ತೀರ್ಪುಗಳಾಗಿಲ್ಲವಾದ್ದರಿಂದ ಸದರಿ ತೀರ್ಪುಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ, ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ನ್ಯಾಯತಾ ದೃಷ್ಠಿಯಿಂದ ಅತೀ ಅವಶ್ಯವಿರುತ್ತದೆ.

**5)** ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ

ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966ರ 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6) ಆದ್ದರಿಂದ, ಎದುರುದಾರರ ಶ್ರೀ **ಭಾಸ್ಕರ ಸಿದ್ರಾಮಪ್ಪ ಚೌರ ಬಿನ್ ಲೇಟ್ ಸಿದ್ರಾಮಪ್ಪ, ಉಪ ನೋಂದಣಾಧಿಕಾರಿಗಳು, ಜಾಲಾ ಉಪ ನೋಂದಣಾಧಿಕಾರಿಗಳ ಕಚೇರಿ, ಚಿಕ್ಕಜಾಲ ಟೌನ್, ಬೆಂಗಳೂರು (ವಯೋ ನಿವೃತ್ತಿ ದಿನಾಂಕ:31/07/2027)** ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4)ರ ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

20/3/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು-1,**
**ಕರ್ನಾಟಕ ರಾಜ್ಯ, ಬೆಂಗಳೂರು.**